ಆ) ಪ್ರಾಣಿ ಸಂಕುಲಕ್ಕೆ ಮಾರಕವಾಗಿರುವ ಇದರ ನಿಯಂತ್ರಣಕ್ಕೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳುವುದು ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಶಾಖೋತ್ಪನ್ನ ವಿದ್ಯುತ್ ಸ್ಥಾವರ ಹೊಗೆಯಲ್ಲಿನ ಧೂಳಿನಿಂದ ಆಮ್ಲ ಮಳೆಯಾಗುವುದಿಲ್ಲ ಆದರೆ ಹೊಗೆಯಲ್ಲಿನ ಗಂಧಕದ ಡೈಆಕ್ಸೈಡ್ (SO2) ಪ್ರಮಾಣವು ಹೆಚ್ಚಾದಾಗ, ಇದು ಹವಾಮಾನದಲ್ಲಿರುವ ತೇವಾಂಶದೊಂದಿಗೆ ಬೆರೆತು ಆಮ್ಲ ಮಳೆಗೆ ಕಾರಣವಾಗುತ್ತದೆ

ಹೊಗೆಯಲ್ಲಿ ಗಂಧಕದ ಡೈಆಕ್ಸೈಡನ್ನು ನಿಯಂತ್ರಿಸಲು ಕಡಿಮೆ ಗಂಧಕ ಅಂಶವುಳ್ಳ ಉರವಲು ಉಪಯೋಗಿಸುವುದರಿಂದ ಅಥವಾ flue gas desulphurisation ಘಟಕ ಸ್ಥಾಪಿಸಿ ಗಂಧಕವನ್ನು ಹಿಂಪಡೆಯುವುದರಿಂದ (Recovery) ಅಥವಾ ನಿಗದಿಪಡಿಸಿದ ಎತ್ತರದ ಚಿಮಣಿ ಅಳವಡಿಸುವುದು, ಇಂತಹ ಕ್ರಮಗಳನ್ನು ಕೈಗೊಂಡರೆ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಹೊಗೆಯಿಂದ ಉಂಟಾಗುವ ಆಮ್ಲ ಮಳೆಯನ್ನು ತಡೆಗಟ್ಟಬಹುದಾಗಿದೆ

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿನ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಿಗೆ ಹೊಗೆಯಲ್ಲಿನ ಮಾಲಿನ್ಯ ಕಾರಕಗಳನ್ನು ನಿಯಂತ್ರಿಸಲು ಕೆಳಕಂಡ ನಿಬಂಧನೆಗಳನ್ನು ಒಳಗೊಂಡಂತೆ ಸಮ್ಮತಿ ಪತ್ರ ನೀಡಿದ್ದು, ಇದನ್ನು ಅನುಷ್ಠಾನಗೊಳಿಸಲಾಗುತ್ತಿದೆ

1 ಶೇ 0 4% ಗಿಂತ ಕಡಿಮೆ ಸಲ್ಫರ್ ಮತ್ತು 15% ಬೂದಿ ಇರುವಂತಹ ಕಲ್ಲಿದ್ದಲು ಬಳಸುವುದು

2 ಹೊಗೆಯಲ್ಲಿನ ಗಂಧಕದ ಡೈ ಆಕ್ಸೈಡ್ ಕಡಿಮೆ ಮಾಡಲು ಪ್ರಾರಂಭ ಸಮಯ ಮತ್ತು flare stabilization ಸಮಯದಲ್ಲಿ ಕಡಿಮೆ ಸಲ್ಫರ್ ಇರುವ ಕಲ್ಲಿದ್ದಲು ಬಳಸುವುದು

3 ಸಸ್ಪೆಂಡೆಡ್ ಘಾರ್ಟಿಕ್ಯುಲೇಟ್ ಮ್ಯಾಟರ್ ಅನ್ನು ನಿಯಂತ್ರಿಸಲು ಎಲೆಕ್ಟ್ರೋಸ್ಟಾಟಿಕ್ ಪ್ರಿಸಿಪಿಟೇಟರ್ ಅಳವಡಿಸುವುದು ಮತ್ತು ಬಾಯ್ಲರ್‌ಗಳಿಗೆ ಅಗತ್ಯವಾದ ಚಿಮಣಿಯನ್ನು ಅಳವಡಿಸುವುದು

764 (666) ಡಾ ಮಹಾದೇವಪ್ಪ ಹೆಚ್ ಸಿ (ಟಿ ನರಸೀಪುರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕಾಫಿ ಪ್ಲಾಂಟರುಗಳು ಸಾವಿರಾರು ಎಕರೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಒತ್ತುವರಿ ಮಾಡಿರುವ ವಿಸ್ತೀರ್ಣವೆಷ್ಟು , (ಒತ್ತುವರಿದಾರರುಗಳ ಹೆಸರು, ವಿಳಾಸ ಮತ್ತು ಒತ್ತುವರಿ ಮಾಡಿರುವ ವಿಸ್ತೀರ್ಣದ ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಜಿಲ್ಲೆಯಲ್ಲಿ ದೊಡ್ಡ ಹಿಡುವಳಿದಾರರು ಸರ್ಕಾರಿ ಜಮೀನು ಒತ್ತುವರಿ ಮಾಡಿ ಕಾಫಿ ಸಾಗುವಳಿ ಮಾಡಿರುವ ಜಮೀನಿನ ಅಂದಾಜು ವಿವರ ಕೆಳಗಿನಂತಿದೆ

ಕ್ರ.ಸಂ	ತಾಲ್ಲೂಕು	ಒತ್ತುವರಿ ವಿಸ್ತೀರ್ಣ ಎಕರೆ ಗುಂಟೆ
1	ಚಿಕ್ಕಮಗಳೂರು	12972–35
2	ಕೊಪ್ಪ	1841–03
3	ಶೃಂಗೇರಿ	280–06
4	ಮೂಡಿಗೆರೆ	12267–03
5	ನರಸಿಂಹರಾಜಪುರ	2706–35
6	ತರೀಕೆರೆ	215–00
7	ಕಡೂರು	50–00
	ಒಟ್ಟು	**30333–02**

ಒತ್ತುವರಿ ವಿಸ್ತೀರ್ಣವು ಅಂದಾಜಿನದಾಗಿದ್ದು ಸರ್ವೆ ಮೂಲಕ ಗುರುತಿಸಿದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ ಒತ್ತುವರಿದಾರರ ಹೆಸರು, ವಿಳಾಸ ಮತ್ತು ವಿಸ್ತೀರ್ಣದ ವಿವರಗಳನ್ನು ನಿಖರವಾಗಿ ನೀಡಲು ಕಾಲಾವಕಾಶದ ಅಗತ್ಯವಿರುತ್ತದೆ ಭೂ ಕಂದಾಯ ಕಾಯಿದೆಯ ಕಲಂ 94ಎ ಮತ್ತು 94ಬಿ ಪ್ರಕಾರ ಒತ್ತುವರಿದಾರನು ಹೊಂದಿರುವ ಜಮೀನೂ ಸೇರಿ 4 38 ಎಕರೆವರೆಗೆ ಮಾತ್ರ ಸಕ್ರಮಗೊಳಿಸಲು ಅವಕಾಶವಿರುವುದರಿಂದ, ಈ ಮಿತಿಗಿಂತ ಹೆಚ್ಚು ಜಮೀನು ಹೊಂದಿದ ಎಲ್ಲಾ ಒತ್ತುವರಿದಾರರೂ ದೊಡ್ಡ ಹಿಡುವಳಿದಾರರಾಗುವುದರಿಂದ, ದೊಡ್ಡ ಕಾಫಿ ಪ್ಲಾಂಟರುಗಳನ್ನು ಗುರುತಿಸಲು ನಿರ್ದಿಷ್ಟ ಮಾನದಂಡದ ಅಗತ್ಯವಿದೆ

767 (1196) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಳ್ಳಾರಿ ಪ್ರಾದೇಶಿಕ ಅರಣ್ಯ ವಿಭಾಗ ಮತ್ತು ನೆರೆಯ ಆಂಧ್ರ ಪ್ರದೇಶ ರಾಜ್ಯದ ಗಡಿ ರೇಖೆಯ ವಿವಾದವನ್ನು ಬಗೆ ಹರಿಸಿಕೊಳ್ಳುವವರೆವಿಗೂ ವಿವಾದದ ಮೀಸಲು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಹಾಗೂ ವೇಸ್ಟ್‌ಡಂಪ್‌ಗಳನ್ನು (ಕಬ್ಬಿಣದ ಅದಿರಿನ ಕಸ) ತೆಗೆಯಬಾರದೆಂದು ಸರ್ವೋಚ್ಚ ನ್ಯಾಯಾಲಯವು 2006ರ ಫೆಬ್ರವರಿ ಮತ್ತು ಏಪ್ರಿಲ್ ತಿಂಗಳಲ್ಲಿ ತಡೆಯಾದೇಶವನ್ನು ನೀಡಿ ಅರಣ್ಯ ಮತ್ತು ಗಣಿ ಇಲಾಖೆಯ ಜಂಟಿ ಸಮೀಕ್ಷೆಗೆ ಆದೇಶ ನೀಡಿರುವುದು ನಿಜವೇ ,